ಫಾರೂಖ್ ಕೈ ಮುಂದೆ ಚಾಚಿ, "ಹಾಗಾದ್ರೆ, ನೀವು ದಾಶಗುಪ್ತೊ ಬಾಬು" ಎಂದ.

ಪ್ರೀತಿಯ ಬಾಬಾ ಎರಡು ಹೆಜ್ಜೆ ಮುಂದಡಿಯಿಟ್ಟು, "ನೀವೂ, ಫಾರೂಖ್ ಸಾಹೇಬ್?" ಅನ್ನುತ್ತಾ ಫಾರೂಖ್‌ನ ಕೈ ಕುಲುಕಿದ.

ಅಲ್ಲಿಂದ ಶುರು. ಅವರು ಇವರ ಮನೆಗೆ, ಇವರು ಅವರ ಮನೆಗೆ ಹೋಗಿಬರೋದು ಮೊದಲಾಯಿತು. ಶ್ರೀಮತಿ ದಾಶಗುಪ್ತೊ ಗೌರವರ್ಣದ, ಗುಂಗುರು ಕೂದಲಿನ ಸುಂದರಿ. ಒಂದು ಕಾಲದಲ್ಲಿ ನೃತ್ಯಗಾತಿಯಾಗಿದ್ದಳು. ಈಗ ದಿಲ್ಲಿಗೆ ಬಂದ ಮೇಲೆ ನೃತ್ಯ ಮಾಡಲಾಗುತ್ತಿಲ್ಲವೆಂಬ ವಿಷಾದ ಆಕೆಯದು. ಆದರೂ ಅವರ ಮಾತುಕತೆಯ ಕೇಂದ್ರಬಿಂದು ಫರೀನ್ ಮತ್ತು ಪ್ರೀತಿ. ಇಬ್ಬರಿಗೂ ಆಶ್ಚರ್ಯ! ಇಂಗ್ಲಿಷ್ ಮಾಧ್ಯಮದ ಶಾಲೆಯಲ್ಲಿ, ಎಲ್ಲಾ ಹಿಂದಿ ಮಾತನಾಡುವ ಮಕ್ಕಳ ನಡುವೆ ಅದ್ಹೇಗೆ ಈ ಎರಡೂ ಬಂಗಾಳಿ ಹುಡುಗಿಯರು ಪರಸ್ಪರ ಹುಡುಕಿಕೊಂಡು ಜೊತೆಯಾದರೆಂದು. ಈ ಕುರಿತು ಅವರು ಪರಸ್ಪರ ಹಾಸ್ಯ ಚಟಾಕಿಗಳನ್ನೂ ಸಿಡಿಸಿಕೊಂಡರು.

ಈದ್ ಸಮಯದಲ್ಲಿ ಶ್ರೀಮತಿ ದಾಶಗುಪ್ತೊ ಫರ್ಝಾನ್ನಾಗೆ ಕೇಳುತ್ತಿದ್ದಳು, "ನನಗೆ ಶ್ಯಾವಿಗೆ ಪಾಯಸ ತುಂಬಾ ಇಷ್ಟ, ಅದು ಇರುತ್ತಲ್ವಾ?" ಫರ್ಝಾನ್ನಾ ತಾನೇ ಸ್ವತಃ ಮುಂದೆ ನಿಂತು ಎರಡೆರಡು ತರಹದ ಶ್ಯಾವಿಗೆ ಪಾಯಸ ತಯಾರಿಸುತ್ತಿದ್ದಳು.

ದುರ್ಗಾ ಪೂಜೆ ಸಮಯದಲ್ಲಿ ಫರೀನ್ ಮನೆಗೆ ಸಿಹಿ ಪೊಟ್ಟಣಗಳು ಬರುತ್ತಿದ್ದವು. ದಾಶಗುಪ್ತೊ ಕುಟುಂಬ ಫರ್ಝಾನ್ನಾ, ಫರೀನ್‌ರನ್ನು ಕರೆದುಕೊಂಡು ಬಗೆಬಗೆಯ ದುರ್ಗಾ ಮಂಟಪಗಳನ್ನು ನೋಡಲು ಹೋಗುತ್ತಿದ್ದರು. ಮಕ್ಕಳಿಬ್ಬರು ಪರಸ್ಪರರ ತೋಳಿಗೆ ತೆಕ್ಕೆ ಹಾಕಿಕೊಂಡು ಮುಗ್ಧರಾಗಿ ದುರ್ಗಾ ಪ್ರತಿಮೆಗಳನ್ನು ನೋಡುತ್ತಾ ಸುತ್ತುತ್ತಿದ್ದರು.

ಅಂಥ ಪ್ರೀತಿಯ ಹುಟ್ಟಿದ ಹಬ್ಬಕ್ಕೆ ಹೋಗದಿದ್ರೆ ಚೆನ್ನಾಗಿರೋಲ್ಲ. ಆದರೆ, ಟ್ಯಾಕ್ಸಿ ಹಿಡಿದು ಫರೀನ್ ಕರೆದುಕೊಂಡು ಒಬ್ಬಳೇ ಹೋಗಲು ಫರ್ಝಾನ್ನಾಗೆ ಧೈರ್ಯವಾಗಲಿಲ್ಲ. ನಗರದ ಸ್ಥಿತಿ ಹೇಗಿತ್ತೆಂದರೆ ಸಂಜೆ ಹೊತ್ತು ಒಬ್ಬಳೇ ಹೋಗದೇ ಇರೋದೇ ಒಳ್ಳೇದು, ಯಾವಾಗ ಏನಾಗುತ್ತೋ ಯಾರಿಗೆ ಗೊತ್ತು! ಅದೂ ಅಲ್ಲದೆ, ದಾಶಗುಪ್ತೊ ಮನೆ ತುಂಬಾ ದೂರ. ಹೋಗಬೇಕಂದ್ರೆ ಕಡಿಮೆ ಅಂದ್ರೂ ಅರ್ಧಗಂಟೆ ಬೇಕು. ಫಾರೂಖ್ ಇದ್ದಿದ್ರೆ ತೊಂದರೆಯಿರಲಿಲ್ಲ. ಕಾರಲ್ಲೇ ಹೋಗಬಹುದಿತ್ತು. ಫರ್ಝಾನ್ನಾ ಹೋಗದೆ ಇರಲು ನಿರ್ಧರಿಸಿದಳು. ಆದರೂ ಮನಸ್ಸು ಅಸ್ತವ್ಯಸ್ತವಾಗಿತ್ತು. ಹುಟ್ಟಿದ ಹಬ್ಬಕ್ಕೆ ಹೋದರೆ ನಿಜವಾಗ್ಲೂ ಫರೀನ್ ತುಂಬಾ ಖುಷಿಪಡುತ್ತಾಳೆ. ಮಗಳನ್ನು ಎತ್ತಿಕೊಂಡು ಮುದ್ದು ಮಾಡುತ್ತಾ ಫರ್ಝಾನ್ನಾ ನುಡಿದಳು, "ಕಂದಾ, ನಿಮ್ಮ ಬಾಬಾ ಇಲ್ಲ. ಇಬ್ಬರೇ ಹೇಗೆ ಹೋಗೋದು?"

ಫರೀನ್ ಸಹಜವಾಗಿ ನುಡಿದಳು, "ನಡಿ, ಟ್ಯಾಕ್ಸಿಯಲ್ಲಿ ಹೋಗೋಣ".

"ಈಗ ಎಲ್ಲಾ ಕಡೆ ಗಲಾಟೆ ನಡೀತಾ ಇದೆ. ಹಿಂದೂ ಮುಸ್ಲಿಂರ ಮಧ್ಯೆ..." ಫರ್ಝಾನ್ನಾ ನಾಲಿಗೆ ಕಚ್ಚಿಕೊಂಡಳು.

ಫರೀನ್ ಅವಾಕ್ಕಾಗಿ ಅಮ್ಮನನ್ನು ಕೇಳಿದಳು, "ಹಂಗಂದ್ರೆ, ಏನಮ್ಮಾ?"

ಫರ್ಝಾನ್ನಾ ಏನು ಹೇಳಬೇಕೆಂದು ತೋಚದೆ ಸುಮ್ಮನಾದಳು. ಇಷ್ಟು ಚಿಕ್ಕ ಹುಡುಗಿಗೆ ಅದನ್ನೆಲ್ಲ ಹೇಳೋದು ಸರಿಯಲ್ಲ. ಅವಳ ನಿಷ್ಕಲ್ಮಷ ಮನಸ್ಸಿನಲ್ಲಿ ಸಂಶಯದ ಬೀಜ ಬಿತ್ತಿದಂತಾಗುತ್ತದೆ. ಈಗಾಗಲೇ ಎಲ್ಲಾ ಕಡೆ ಪರಿಸ್ಥಿತಿ ಕೆಟ್ಟಿದೆ. ಗಲಾಟೆ ಬಗ್ಗೆ ಮಾತುಕತೆ ನಡೀತಾ ಇದೆ. ಫರೀನ್ ಇದೆಲ್ಲ ಕೇಳಿಸಿಕೊಳ್ಳುತ್ತಿದ್ದಾಳೆ. ಮಗಳಿಂದ ಇದೆಲ್ಲ ದೂರವಿಡಬೇಕೆಂದು ಪ್ರಯತ್ನಿಸಿದರೂ ಅದು ಸಫಲವಾಗುತ್ತಿಲ್ಲ. ಅಷ್ಟು ಎಚ್ಚರಿಕೆಯಿಂದ ಮಾತನಾಡಲಾಗುತ್ತಿಲ್ಲ.

ತನ್ನನ್ನು ತಾನು ಹತೋಟಿಗೆ ತಂದುಕೊಂಡು ಫರ್ಝಾನ್ನಾ ನುಡಿದಳು, "ಈಗ ನಿನಗೆ ಅದೆಲ್ಲ